ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 21-06-2018

ಪ್ರಕಟಣೆಯ ಕೃಪೆಗಾಗಿ

**ಜೆಎಸ್‌ಎಸ್ ಮಹಿಳಾ ಕಾಲೇಜಿಗೆ ಶೇಕಡ 92 ಫಲಿತಾಂಶ**

ಕೊಳ್ಳೇಗಾಲ : 21-06-2018 : ಕಳೆದ ಏಪ್ರಿಲ್ – ಮೇ 2018ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ನಡೆಸಿದ ಪದವಿ ಪರೀಕ್ಷೆಗಳ ಅಂತಿಮ ಪದವಿ ಫಲಿತಾಂಶವು ಪ್ರಕಟಗೊಂಡಿದ್ದು ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿಗೆ ಅಂತಿಮ ಬಿ.ಕಾಂನಲ್ಲಿ ಶೇ.92 ಹಾಗೂ ಅಂತಿಮ ಬಿಬಿಎ ನಲ್ಲಿ ಶೇ.91 ಫಲಿತಾಂಶ ಬಂದಿರುತ್ತದೆ.

ಅಂತಿಮ ಬಿ.ಕಾಂ ಪರೀಕ್ಷೆಗೆ 83 ವಿದ್ಯಾರ್ಥಿನಿಯರು ಹಾಜರಾಗಿದ್ದು 76 ವಿದ್ಯಾರ್ಥಿನಿಯರು ತೇರ್ಗಡೆ ಹೊಂದಿರುವುದಲ್ಲದೆ 24 ವಿದ್ಯಾರ್ಥಿನಿಯರು ಡಿಸ್ಟಿಂಗ್‌ಷನ್, 46 ವಿದ್ಯಾರ್ಥಿನಿಯರು ಪ್ರಥಮ ದರ್ಜೆ, 06 ವಿದ್ಯಾರ್ಥಿನಿಯರು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಮೂರು ವಿದ್ಯಾರ್ಥಿನಿಯರು ಕು. ಸಂಗೀತ, ಕು. ಪ್ರತಿಮ ಎನ್ ಹಾಗೂ ಕು. ಪವಿತ್ರ ಆರ್ ಬಿಸಿನೆಸ್ ಸ್ಟ್ಯಾಟಿಸ್ಟಿಕ್ ವಿಷಯದಲ್ಲಿ ನೂರಕ್ಕೆ ನೂರು ಅಂಕಗಳಿಸಿರುತ್ತಾರೆ.

ಅಂತಿಮ ಬಿ.ಬಿ.ಎ ಪರೀಕ್ಷೆಯಲ್ಲಿ 23 ವಿದ್ಯಾರ್ಥಿನಿಯರು ಹಾಜರಾಗಿದ್ದು 21 ವಿದ್ಯಾರ್ಥಿನಿಯರು ತೇರ್ಗಡೆ ಹೊಂದಿ ಶೇ.91ರ ಫಲಿತಾಂಶ ಬಂದಿರುತ್ತದೆ. ಓರ್ವ ವಿದ್ಯಾರ್ಥಿನಿ ಡಿಸ್ಟಿಂಗ್‌ಷನ್‌ನಲ್ಲಿ, 12 ವಿದ್ಯಾರ್ಥಿನಿಯರು ಪ್ರಥಮ ದರ್ಜೆಯಲ್ಲಿ, 08 ವಿದ್ಯಾರ್ಥಿನಿಯರು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ ಎಂದು ಪ್ರಾಚಾರ್ಯ ಪ್ರೊ. ಉಮೇಶರವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ. ಉತ್ತಮ ಫಲಿತಾಂಶಕ್ಕಾಗಿ ಅಧ್ಯಾಪಕ ಹಾಗೂ ವಿದ್ಯಾರ್ಥಿ ವೃಂದದವರನ್ನು ಪ್ರಾಚಾರ್ಯರು ಅಭಿನಂದಿಸಿರುತ್ತಾರೆ.

ಪ್ರಾಚಾರ್ಯರು
ಜೆ. ಎಸ್. ಎಸ್. ಮಹಿಳಾ ಕಾಲೇಜು
ಕೊಳ್ಳೇಗಾಲ.